ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1044 (962)

2) ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 15.03.2021

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಟ್ಟು ಎಷ್ಟು ಆನೆ ಶಿಬಿರಗಳಿವೆ; ಜಿಲ್ಲಾವಾರು ಶಿಬಿರಗಳ ಹೆಸರಿನೊಂದಿಗೆ ಅಲ್ಲಿರುವ ಆನೆಗಳ ಸಂಖ್ಯೆ ಮತ್ತು ಮಾವುತರ ಸಂಖ್ಯೆಗಳ ವಿವರ ನೀಡುವುದು;	ರಾಜ್ಯದಲ್ಲಿರುವ ಆನೆ ಶಿಬಿರ, ಆನೆಗಳ ಸಂಖ್ಯೆ ಮತ್ತು ಮಾವುತರ ಸಂಖ್ಯೆ ಈ ಕೆಳಕಂಡಂತಿದೆ:

ಕ್ರ ಸಂ	ಜಿಲ್ಲೆ	ಆನೆ ಶಿಬಿರದ ಹೆಸರು / ವಿಭಾಗ		ಆನೆಗಳ ಸಂಖ್ಯೆ	ಮಾವುತರ ಸಂಖ್ಯೆ
1	ಶಿವಮೊಗ್ಗ	ಸಕ್ರೆಬೈಲು, ವನ್ಯಜೀವಿ ವಿಭಾಗ ಶಿವಮೊಗ್ಗ		22	14 ಖಾಯಂ ಸಿಬ್ಬಂದಿ
2	ಚಾಮರಾಜನಗರ	ರಾಮಾಪುರ, ಬಂಡೀಪುರ ಹುಲಿ ಯೋಜನೆ		13	11 ಖಾಯಂ ಸಿಬ್ಬಂದಿ
3	ಕೊಡಗು	ಕಂಠಾಪುರ / ಮತ್ತಿಗೋಡು	ನಾಗರಹೊಳೆ ಹುಲಿ ಯೋಜನೆ	23	21 ಖಾಯಂ ಸಿಬ್ಬಂದಿ
		ಬಳ್ಳೆ		03	02 ಖಾಯಂ ಸಿಬ್ಬಂದಿ
		ದೊಡ್ಡಹರವೆ		05	05 ಹೊರಗುತ್ತಿಗೆ
4	ಚಾಮರಾಜನಗರ	ಕೆ.ಗುಡಿ, ಬಿ.ಆರ್.ಟಿ ಹುಲಿ ಯೋಜನೆ		01	01 ಖಾಯಂ ಸಿಬ್ಬಂದಿ
5	ಉತ್ತರಕನ್ನಡ	ಪಣಸೋಲಿ, ದಾಂಡೇಲಿ ಹುಲಿ ಯೋಜನೆ		03	04 ಹೊರಗುತ್ತಿಗೆ
6	ಕೊಡಗು	ದುಬಾರೆ, ಮಡಿಕೇರಿ ಪ್ರಾದೇಶಿಕ ವಿಭಾಗ		31	16 ಖಾಯಂ ಸಿಬ್ಬಂದಿ 10 ಹೊರಗುತ್ತಿಗೆ

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕಿನ ಚಿಕ್ಲಿ ಹೊಳೆ ಜಲಾಶಯದ ಬಳಿ ಆನೆ ಪಾರ್ಕ್ ಅಥವಾ ಸಾಕಾನೆ ಶಿಬಿರವನ್ನು ಸ್ಥಾಪನೆ ಮಾಡಿದ್ದಲ್ಲಿ ಅರಣ್ಯ ಇಲಾಖೆಗೆ ಉಪಯೋಗವಾಗುವುದಿಲ್ಲವೇ; ಇದಕ್ಕೆ ಸರ್ಕಾರದ ಚಿಂತನೆಗಳೇನು? (ವಿವರ ನೀಡುವುದು)	ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 21570/2019ರಲ್ಲಿ ನೀಡಿರುವ ಆದೇಶದಂತೆ, ಆನೆ ಶಿಬಿರಗಳಲ್ಲಿ ಹೆಚ್ಚಿನ ಸಂಖ್ಯೆಯ ಆನೆಗಳಿಗಾಗಿ ಹೊಸ ಸಾಕಾನೆ ಶಿಬಿರವನ್ನು ಸ್ಥಾಪಿಸಿ, ಸ್ಥಳಾಂತರಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಕುಶಾಲನಗರ ವಲಯ ವ್ಯಾಪ್ತಿಯ ಅತ್ತೂರು ಶಾಖೆಯ ಹಾರಂಗಿ ಜಲಾಶಯದ ಟ್ರೀ ಪಾರ್ಕ್ ಬಳಿ ಹೊಸ ಸಾಕಾನೆ ಶಿಬಿರವನ್ನು ಸ್ಥಾಪಿಸಲು ದಿನಾಂಕ:12.02.2021 ರಂದು ಅನುಮತಿ ನೀಡಲಾಗಿದ್ದು,ಇದಕ್ಕೆ ಬೇಕಿರುವ ಮೂಲಭೂತ ಸೌಕರ್ಯ ಅಭಿವೃದ್ಧಿಯ ಕಾಮಗಾರಿಗಳನ್ನು ಕೊಡಗು ಮಾನವ ವನ್ಯಪ್ರಾಣಿ ಸಂಘರ್ಷ ಉಪಶಮನ ಪ್ರತಿಷ್ಠಾನ ನಿಧಿಯಡಿ ಭರಿಸಲು ಸೂಚಿಸಲಾಗಿರುತ್ತದೆ.

ಸಂಖ್ಯೆ: ಅಪಜೀ 42 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು